‘ಅಕ್ಕಾ... ನಾಳೆ ನಾನು ಕೆಲ್ಸಕ್ಕೆ ಬರಾಕಿಲ್ಲ... ನಮ್ಮವ್ವ ಊರಿಂದ ಫೋನ್ ಮಾಡಿತ್ತು. ‘ನಿನ್ನ ನೋಡಂಗಾಗಿದೆ ಕಣೇ ತಾಯೀ... ಒಂದಿನದಮಟ್ಟಿಗೆ ಬಂದ್ ಹೋಗು’ ಅಂತ ಕೇಳ್ತು. ಯಾಕೊ, ಕರುಳು ಚುರ್ ಅಂತು. ಅದ್ಕೆಯಾ... ಇವತ್ತು ಹೋಗಿ ನಾಳೆ ಸಂಜೆಗೆ ಬಂದ್‌ಬಿಡ್ತೀನಿ...’

ತಾಯಮ್ಮ ಸಿಂಕ್‌ನ ಮುಂದೆ ಪಾತ್ರೆ ಉಜ್ಜುತ್ತಲೇ ಹೇಳಿದಾಗ ಕತ್ತೆತ್ತಿದೆ. ಯಾಕೋ ಅವಳ ಕಣ್ಣಲ್ಲಿ ನೀರು ಕಂಡಾಗ ಮನಸು ಮೃದುವಾಯಿತು.

ಬೆಳಿಗ್ಗೆ 8ಕ್ಕೆ ಬಂದರೆ 10 ಗಂಟೆಯವರೆಗೂ ಒಂದೇ ಸಮನೆ ಕೆಲಸ ಮಾಡುತ್ತಾಳೆ. ಇಡೀ ಮನೆಯನ್ನ ಗುಡಿಸಿ. ಫಳ ಫಳ ಅನ್ನುವಂತೆ ಒರೆಸುತ್ತಾಳೆ. ಪಾತ್ರೆಗಳನ್ನು ತೊಳೆದು ಜೋಡಿಸಿ ಕೊಡುತ್ತಾಳೆ. ಸೋಫಾ–ಟೇಬಲ್ಲುಗಳನ್ನು, ಕಿಟಕಿ ಗಾಜುಗಳನ್ನು ನೀಟಾಗಿ ಒರೆಸಿಡುತ್ತಾಳೆ. ಅಗತ್ಯ ಬಿದ್ದರೆ ತರಕಾರಿ ಹೆಚ್ಚಿಕೊಡುತ್ತಾಳೆ. ಸದಾ ನೀಟಾಗಿ–ಸ್ವಚ್ಛವಾಗಿ ಬರುತ್ತಾಳೆ. ಯಾವುದಕ್ಕೂ ಹೆಚ್ಚು ಆಸೆ ಪಡುವುದಿಲ್ಲ.

‘ಅಕ್ಕಾ ನಂಗೆ ಶುಗರ್ ಬಂದ್‌ಬಿಟ್ಟಿದೆ ಕಣಕ್ಕ. ಇನ್ನು ಮೇಲೆ ಸಕ್ಕರೆ ತಿನ್ನಬೇಡ, ಅಕ್ಕಿ ತಿನ್ನಬೇಡ ಅಂತ ಡಾಕ್ಟ್ರು ಹೇಳಿದ್ರು. ನಾವು ಹಳ್ಳೀನಲ್ಲಿ ಸಕ್ಕರೇನೇ ಕಂಡವರಲ್ಲ. ಬರೀ ಬೆಲ್ಲದ ಕಾಫಿ ನೀರು ಕುಡೀತಿದ್ದು... ಅನ್ನ ಅಂತೂ ಕಾಣೇ... ರಾಗಿ ಮುದ್ದೆ, ರಾಗಿ ರೊಟ್ಟಿ ತಿನ್ಕಂಡು ಬೆಳೆದವರು. ಹಗಲೂ ರಾತ್ರಿ ಮೈ ಮುರಿದು ಕೆಲ್ಸ ಮಾಡ್ತಿದ್ವು... ಈ ಹಾಳು ಕಾಯ್ಲೆ ನಮ್ಮಂಥೋರಿಗೆ ಯಾಕಕ್ಕ ಬರುತ್ತೆ...’ ಅಂತ ಅಲವತ್ತುಕೊಳ್ಳುತ್ತಿದ್ದಳು.

ಸಕ್ಕರೆ ಇಲ್ಲದ ಕಹಿ ಕಾಫಿಯನ್ನ ಮಾತ್ರ ಕುಡಿಯುತ್ತಿದ್ದಳು. ‘ನೀವು ಎಣ್ಣೆ, ತುಪ್ಪ, ಸಕ್ಕರೆ ಜಾಸ್ತಿ ಹಾಕಿ ತಿಂಡಿ ಮಾಡಿರ್ತೀರೀ... ನಂಗೆ ತಿಂಡಿ ಬೇಡ ಕಣಕ್ಕ, ಮನೇಲಿ ರಾಗಿ ಅಂಬಲಿ ಕುಡ್ಕೊಂಡು ಬಂದಿದೀನಿ... ನನ್ನ ಹಣೆಬರಹ ಬುಡಿ ಅತ್ಲಾಗೆ...’ ಅಂತ ನಗುತ್ತಿದ್ದಳು.

ಕಂದು ಬಣ್ಣದ ಐದಡಿ ಎತ್ತರದ, ಗುಂಗುರು ದಟ್ಟ ಕೂದಲಿನ ಸುಮಾರು 50ರ ಹತ್ತಿರದ ವಯಸ್ಸು. ಕೈ–ಬಾಯಿ ಶುದ್ಧವಾಗಿತ್ತು. ನಮ್ಮ ಅಪಾರ್ಟ್‌ಮೆಂಟಿನಲ್ಲಿ ನಾಲ್ಕು ಮನೆಗಳನ್ನು ಒಪ್ಪಿಕೊಂಡಿದ್ದಳು. ಒಪ್ಪಿಕೊಂಡಿದ್ದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಳು. ಒಬ್ಬರ ಮನೆ ವಿಷಯವನ್ನು ಇನ್ನೊಬ್ಬರ ಮನೆಗೆ ಯಾವತ್ತೂ ತಂದವಳಲ್ಲ. ಹೆಚ್ಚು ಮನೆಗಳನ್ನು ಒಪ್ಪಿಕೊಳ್ಳದೇ ತನ್ನಿಂದ ನಿಭಾಯಿಸಲು ಸಾಧ್ಯವಾದಷ್ಟನ್ನು ಮಾತ್ರ ಮಾಡುತ್ತಿದ್ದಳು. ಕುಳಿತಾಗ–ನಿಂತಾಗ ಅವಳ ಬಾಳಿನ ಕತೆಗಳು– ಘಟನೆಗಳನ್ನು ಒಂದೊಂದಾಗಿ ಹೇಳುತ್ತಿದ್ದಳು.

‘ನಾನು ಮದ್ವೆ ಬ್ಯಾಡಾಂತ ಅನ್ನ–ನೀರು ಬಿಟ್ಟು ಕುಂತಿದ್ದೆ ಕಣಕ್ಕ. ಕೇಳ್ಳಿಲ್ಲ ನಮ್ಮವ್ವ– ಗಂಡು ಒಪ್ಕಂಡಿರಾದೇ ದೊಡ್ ಇಸ್ಯ ಅಂತಂದು ಆ ಮುಕ್ಕನ್ನ ಕಟ್‌ಬಿಟ್ಳು... ಅವನ್ನ ಕಟ್‌ಕೊಂಡು ಒಂದೊಂದಲ್ಲ ಕಣಕ್ಕ ಅನುಭವಿಸಿದ್ದು... ಕೇಳುದ್ರೆ ನೀವು ಬೇಕಾದರೆ ಒಂದ್ ಪುಸ್ತಕ ಬರೀತಿರಿ ಬಿಡೀ...’ ಅನ್ನುತ್ತಿದ್ದಳು.

ಕಪ್ಪು ಬಣ್ಣದಿಂದ ಬಂದ ಗಂಡುಗಳನ್ನೆಲ್ಲ ನಿರಾಕರಿಸುತ್ತಿದ್ದುದಕ್ಕೆ ತಾಯಮ್ಮನ ತಾಯಿಗೆ ಗಾಬರಿ. ಎಲ್ಲಿ ಮಗಳು ಮದುವೆಯಿಲ್ಲದೆ ಕನ್ಯೆಯಾಗಿಯೇ ಉಳಿಯುತ್ತಾಳೋ ಎಂಬ ಆತಂಕದಿಂದಾಗಿ ಪೂರ್ವಾಪರ ವಿಚಾರಿಸದೇ ತಾಯಮ್ಮನ್ನು ಒಪ್ಪಿದ ಗಂಡಿನೊಟ್ಟಿಗೆ ದೇವಸ್ಥಾನದಲ್ಲಿ ತಾಳಿ ಕಟ್ಟಿಸಿ ಕಳಿಸಿದ್ದರು. ಅವನೋ ಕುಡುಕ. ಈಗಾಗಲೇ ಮದುವೆಯಾಗಿ ಹೆಂಡತಿಯನ್ನು ಬಿಟ್ಟು ಬಂದಿದ್ದವನು.

ಇವಳಿಗೂ ಒಂದು ಹೆಣ್ಣುಮಗುವಾಗುತ್ತಲೇ ಇಲ್ಲಿಂದಲೂ ಪಲಾಯನ ಮಾಡಿದ್ದ. ಹಳ್ಳಿಯಲ್ಲಿ ಹಾಯಾಗಿ ಹೊಲ–ಗದ್ದೆಯ ಕೆಲಸ ಮಾಡುತ್ತ, ಹಸು, ಎಮ್ಮೆ ನೋಡಿಕೊಂಡು, ಹುಲ್ಲು, ಸೊಪ್ಪು, ತಂದುಕೊಂಡು ಮುದ್ದೆ, ಬಸ್ಸಾರು, ಮಸ್ಸಪ್ಪು ಅಂತ ನಿಶ್ಚಿಂತೆಯಾಗಿದ್ದ ತಾಯಮ್ಮನಿಗೆ ಬೆಂಗಳೂರಿನ